
# ಶ್ರೀಮದ್ಭಗವದ್ಗೀತೆ ಮತ್ತು ಶ್ರೀರಾಮಕೃಷ್ಣರು

ಡಾ.ಸಿ.ಪಿ.ಕೃಷ್ಣಕುಮಾರ್



**"ಕೃಷ್ಣಂ** ವಂದೇ ಜಗದ್ಗುರುಂ" ಎನ್ನುತ್ತದೆ, ಗೀತಾಧ್ಯಾನ ಶ್ಲೋಕವೊಂದು. ಅದು ಶ್ರೀರಾಮಕೃಷ್ಣ ಪರಮಹಂಸರಿಗೆ ಕೂಡ ಸಲ್ಲುವ ನಮನ! ಗೀತೆಗೂ ಶ್ರೀರಾಮಕೃಷ್ಣರಿಗೂ ಅವಿನಾಭಾವ ಸಂಬಂಧ; ಅದು ಸಂಕೀರ್ಣ ಸಂಬಂಧವೂ ಹೌದು. ವಾಸ್ತವವಾಗಿ ಭಗವದ್ಗೀತೆ ಮತ್ತು ಶ್ರೀರಾಮಕೃಷ್ಣಚೇತನ ಬಹುಮುಖ ಸಂಕೀರ್ಣವಾದವು!

ಗೀತೆಯ ಪರಮೋಚ್ಚ ಆದರ್ಶ, ಶ್ರೀರಾಮಕೃಷ್ಣರು. ಭರತ ಖಂಡದ ಆರ್ಷೇಯ ಸಂಸ್ಕೃತಿಯ ಸಾರಸಂಗ್ರಹ, ಗೀತೆ. ಶ್ರೀರಾಮಕೃಷ್ಣರು ಸನಾತನ ಪರಂಪರೆಯ ಪರಿಣತಫಲ ಮತ್ತು ಪ್ರತಿನಿಧಿ. ಅವರು ಭಕ್ತನೂ ಹೌದು; ಭಗವಂತನೂ ಹೌದು; ಅವತಾರಪುರುಷರೂ ಹೌದು; ಅದೊಂದು ತ್ರಿಕೂಟಾಚಲ!

'ಮೋಕ್ಷಶಾಸ್ತ್ರ'ವೆಂಬುದು ಗೀತೆಯ ಅಗ್ಗಳಿಕೆ; ಅದನ್ನು 'ಭವದ್ವೇಷಿಣಿ' ಎಂದೂ ಕರೆಯಲಾಗಿದೆ. ಶ್ರೀರಾಮಕೃಷ್ಣರು ಭವವನ್ನು ದ್ವೇಷಿಸದಿದ್ದರೂ ಅದರಲ್ಲಿ ಮುಳುಗದೆ, ತೇಲಾಡಿದವರು; ಅಂಟಿಯೂ ಅಂಟದಂತೆ ಬದುಕಿದ್ದವರು. 'ಪದ್ಮಪತ್ರಮ್ ಇವಾಂಭಸಾ'– ಕಮಲಪತ್ರದ ಮೇಲಿನ ಜಲಬಿಂದು (ಗೀತೆಯದೇ ಹೋಲಿಕೆ). ಶ್ರೀರಾಮಕೃಷ್ಣ ಪರಮಹಂಸರು 'ಅಭವದ ದಿವ್ಯ ಸರಸಿಯ ರಾಜಹಂಸ!'

ಶ್ರೀರಾಮಕೃಷ್ಣರು 'ಪೂರ್ವಾವತಾರಗಳ ಪುನರವತಾರ.' ಅವರು ತಮ್ಮ ಜೀವಿತದ ಕಡೆಯ ಗಳಿಗೆಯಲ್ಲಿ ನರೇಂದ್ರನ ಶಂಕೆಯ ನಿರಸನಕ್ಕಾಗಿ ಘೋಷಿಸಿದ ಸತ್ಯಕ್ಕೆ ಕಿವಿಗೊಡಬೇಕು, "ಯಾರು ರಾಮನೋ, ಯಾರು ಕೃಷ್ಣನೋ, ಅವನೇ ಇಂದು ಈ ದೇಹದಲ್ಲಿ ರಾಮಕೃಷ್ಣನಾಗಿದ್ದಾನೆ!"

ಗೀತೆಯ ಈ ಶ್ಲೋಕವನ್ನು ಪರಿಭಾವಿಸಬೇಕು:

ಯದ್ಯದ್ವಿಭೂತಿಮತ್ ಸತ್ವಂ ಶ್ರೀಮದೂರ್ಜಿತಮೇವ ವಾ ।
ತತ್ತದೇವಾವಗಚ್ಛ ತ್ವಂ ಮಮ ತೇಜೋಽಂಶ ಸಂಭವಮ್ ॥

"ಯಾವ ಯಾವ ವಸ್ತು ವಿಭೂತಿಯುಳ್ಳದ್ದೋ ಶ್ರೀಯುಕ್ತವೋ ಅಥವಾ ಉತ್ಸಾಹದಿಂದ ಕೂಡಿದೆಯೋ ಅದೆಲ್ಲವೂ ನನ್ನ ತೇಜಸ್ಸಿನ ಒಂದು ಅಂಶದಿಂದ ಉಂಟಾದುದೆಂದು ತಿಳಿದುಕೋ." (೧೦.೪೧)

> ಶ್ರೀರಾಮಕೃಷ್ಣರು ಭಗವದ್ಗೀತೆಯ ಸಂದೇಶಗಳ ಮೂರ್ತಸ್ವರೂಪರು. ಅಲ್ಲಿ ವರ್ಣಿಸಿರುವ ಸಿದ್ಧಪುರುಷರ ಲಕ್ಷಣಗಳು ಅವರಿಗೆ ಸರಿಯಾಗಿ ಒಪ್ಪುತ್ತವೆ. ಈ ಅಂಶವನ್ನು ಮಾರ್ಮಿಕವಾಗಿ ವರ್ಣಿಸಿರುವ ಮಾನ್ಯ ಲೇಖಕರು ಕನ್ನಡದ ಹೆಸರಾಂತ ಸಾಹಿತಿಗಳು, ಆಶ್ರಮದ ಭಕ್ತರು.

ಈ ಅರ್ಥದಲ್ಲಿ ಶ್ರೀರಾಮಕೃಷ್ಣರು ಅಂಶಾವತಾರ; ಆದರೆ ಇನ್ನೊಂದರ್ಥದಲ್ಲಿ ಅವರು ಪೂರ್ಣಾವತಾರ; 'ಅವತಾರ ವರಿಷ್ಠ.' ಅದನ್ನು ತಿಳಿದುಕೊಳ್ಳಲು ಅವರ ಹುಟ್ಟಿನ ಹಿನ್ನೆಲೆಯನ್ನು, ಅವರ ತಂದೆತಾಯಿಗಳಿಗಾದ ದರ್ಶನಗಳನ್ನು ನೆನೆಯಬೇಕು.

ಗೀತೆಯ ಈ ಸುಪ್ರಸಿದ್ಧವಾದ ಆಶ್ವಾಸನೆಯೂ ಗಮನಾರ್ಹ:

**ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।**

**ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥**

"ಧರ್ಮದ ಅವನತಿಯಾದಾಗ ಧರ್ಮಸಂಸ್ಥಾಪನೆಗಾಗಿ ಪ್ರತಿಯುಗದಲ್ಲಿಯೂ ಅವತರಿಸುತ್ತೇನೆ." (೪.೭ ಮತ್ತು ೮)

ಶ್ರೀರಾಮಕೃಷ್ಣರು, ಸ್ವಾಮಿ ವಿವೇಕಾನಂದರ ಪ್ರಕಾರ, **'ಧರ್ಮಸ್ಥಾಪಕ'** ( 'ಸ್ಥಾಪಕಾಯ ಚ ಧರ್ಮಸ್ಯ') ಆಧುನಿಕ ಯುಗದಲ್ಲಿ ಪಶ್ಚಿಮದ ವಿದ್ಯೆ, ವಿಜ್ಞಾನ, ನಾಗರಿಕತೆಗಳ ಪ್ರಬಲ ಪ್ರಭಾವದಿಂದ ಧರ್ಮಕ್ಕೆ ಹಾನಿ, ಗ್ಲಾನಿಗಳುಂಟಾಗುವ ಸಂಭವವಿದ್ದಾಗ, ಭರತಭೂಮಿಯಲ್ಲಿ, ಧರ್ಮ ಮತ್ತು ಅಧ್ಯಾತ್ಮಗಳನ್ನು ಅಪ್ರತಿಹತವಾಗಿ ಎತ್ತಿ ಹಿಡಿದವರು, ಅವುಗಳಿಗೆ ಜೀವಂತ ದೃಷ್ಟಾಂತವಾದವರು, ಶ್ರೀರಾಮಕೃಷ್ಣರು!

ಗೀತೆಯ ಒಂದು ಪ್ರಮುಖ ಸಂದೇಶವೇನು? ಶ್ರೀರಾಮಕೃಷ್ಣರೇ ಸರಳವಾಗಿ ತಿಳಿಸುತ್ತಾರೆ: "ಗೀತಾ ಎಂಬುದನ್ನು ಸತತವಾಗಿ ಉಚ್ಚರಿಸುತ್ತಿದ್ದರೆ, 'ತಾಗಿ, ತಾಗಿ' ಎಂದಾಗುತ್ತದೆ! ತ್ಯಾಗವೇ ಗೀತೆಯ ತಿರುಳು! ('ತಾಗಿ' ಎಂಬುದು 'ತ್ಯಾಗಿ'

ಎಂಬುದರ ಅಪಭ್ರಂಶ)" ಇದು ಮುಗ್ಧ ವಿವರಣೆ ಎನಿಸಿದರೂ ವಸ್ತುತಃ ಪ್ರಬುದ್ಧವಾದುದು! ಶ್ರೀರಾಮಕೃಷ್ಣರ ಜೀವನವಂತೂ ತ್ಯಾಗಕ್ಕೆ ಬರೆದ ಅನನ್ಯ ಭಾಷ್ಯ! ಅವರ 'ಕಾಮಿನೀ ಕಾಂಚನ' ತ್ಯಾಗ ಸರ್ವವಿದಿತವಾದುದು. ಕ್ರಿಸ್ಟೋಫರ್ ಇಷರ್‌ವುಡ್ ಹೇಳುವಂತೆ, ಅವರು "ತ್ಯಾಗಬುದ್ಧಿಯನ್ನು ಎಷ್ಟು ದೂರ ಚಾಚಬಹುದೋ ಅಷ್ಟು ದೂರ ಚಾಚಿ ನಿಶ್ಚಿಂತರಾದರು."

ಗೀತೆಯಲ್ಲಿ ಉಕ್ತವಾದ 'ಸ್ಥಿತಪ್ರಜ್ಞ' ನ ಲಕ್ಷಣಗಳು ಶ್ರೀರಾಮ ಕೃಷ್ಣರಿಗೆ ಅಕ್ಷರಶಃ ಅನ್ವಯಿಸುತ್ತವೆ; ಅದರಲ್ಲಿ ಬರುವ ಈ ಕೂರ್ಮೋಪಮೆ, ಅವರನ್ನೇ ದೃಷ್ಟಿಯಲ್ಲಿಟ್ಟುಕೊಂಡು ಕಟ್ಟಿದಂತಿದೆ!

**ಯದಾ ಸಂಹರತೇ ಚಾಯಂ ಕೂರ್ಮೋಽಂಗಾನೀವ ಸರ್ವಶಃ ।**
**ಇಂದ್ರಿಯಾಣೀಂದ್ರಿಯಾರ್ಥೇಭ್ಯಸ್ತಸ್ಯ ಪ್ರಜ್ಞಾ ಪ್ರತಿಷ್ಠಿತಾ ॥**

"ಆಮೆಯು ತನ್ನ ಅಂಗಗಳನ್ನು ಒಳಕ್ಕೆ ಎಳೆದುಕೊಳ್ಳುವಂತೆ ಜ್ಞಾನನಿಷ್ಠನಾದ ಯೋಗಿಯು ಯಾವಾಗ ಎಲ್ಲಾ ಕಡೆಗಳಿಂದಲೂ ಇಂದ್ರಿಯಗಳನ್ನು, ಅವುಗಳ ವಿಷಯಗಳಿಂದ ಎಳೆದುಕೊಳ್ಳುವನೋ ಆಗ ಆತನ ಪ್ರಜ್ಞೆಯು ಸ್ಥಿರವಾಗಿರುವುದು." (೨.೫೮)

ಈ ದಿಶೆಯಲ್ಲಿ ಈ ಶ್ಲೋಕವೂ ಪರಿಭಾವನೀಯ :

**ದುಃಖೇಷ್ವನುದ್ವಿಗ್ನಮನಾಃ ಸುಖೇಷು ವಿಗತಸ್ಪೃಹಃ ।**
**ವೀತರಾಗಭಯಕ್ರೋಧಃ ಸ್ಥಿತಧೀರ್ಮುನಿರುಚ್ಯತೇ ॥**

"ದುಃಖಗಳಲ್ಲಿ ಉದ್ವೇಗವಿಲ್ಲದ ಮನಸ್ಸುಳ್ಳವನೂ, ಸುಖಗಳಲ್ಲಿ ಆಸೆಯಿಲ್ಲದವನೂ, ರಾಗ ಭಯ ಕ್ರೋಧಗಳಿಲ್ಲದವನೂ ಆದ ಮುನಿಯು ಸ್ಥಿತಪ್ರಜ್ಞನೆಂದು ಹೇಳಲ್ಪಡುವನು." (೨.೫೬)

**'ಸಮಃ ಸಿದ್ಧಾವಸಿದ್ಧೌ ಚ'** (ಸಿದ್ಧಿ ಅಸಿದ್ಧಿಗಳಲ್ಲಿ ಸಮಬುದ್ಧಿಯುಳ್ಳವನು), **'ತುಲ್ಯನಿಂದಾಸ್ತುತಿರ್ಮೌನೀ'** (ಸ್ತುತಿನಿಂದೆಗಳಲ್ಲಿ ಸಮಭಾವನೆಯುಳ್ಳವನು), **'ಸಮಚಿತ್ತತ್ವಮ್ ಇಷ್ಟಾನಿಷ್ಟೋಪ –ಪತ್ತಿಷು'** (ಇಷ್ಟ, ಅನಿಷ್ಟಗಳು ಪ್ರಾಪ್ತವಾದಾಗ ಯಾವಾಗಲೂ ಸಮಚಿತ್ತತೆ), **'ತುಲ್ಯಪ್ರಿಯಾಪ್ರಿಯೋ'**(ಪ್ರಿಯ, ಅಪ್ರಿಯಗಳಲ್ಲಿ ಸಮನಾಗಿರುವವನು) ಎಂಬ ಉಕ್ತಿಗಳೂ ಗಮನಾರ್ಹ. **'ಸಮದುಃಖಸುಖಂ ಧೀರಂ ಸೋಽಮೃತತ್ವಾಯ ಕಲ್ಪತೇ '** ('ಸುಖ ದುಃಖಗಳನ್ನು ಸಮಾನವೆಂದು ಭಾವಿಸುವ ಜ್ಞಾನಿಯು ಅಮೃತತತ್ವಕ್ಕೆ ಯೋಗ್ಯನಾಗುವನು') ಎಂಬುದೂ ಗೀತೆಯ ನುಡಿ. ಶ್ರೀರಾಮಕೃಷ್ಣರ ಬಾಳು ಅಮೃತತ್ವಕ್ಕೆ ಅರ್ಹವಷ್ಟೆ ಅಲ್ಲ, ಅಮೃತತ್ವದ ಆಕರವೂ ಹೌದು!

ಎಣೆಯಿಲ್ಲದ್ದು, ಶ್ರೀರಾಮಕೃಷ್ಣರ ವೈರಾಗ್ಯ; ಗೀತೆಯ ಈ ಹೇಳಿಕೆಗೆ ಅದು ಅನುಗುಣವಾದುದು:

**ಅಸಂಶಯಂ ಮಹಾಬಾಹೋ**
**ಮನೋ ದುರ್ನಿಗ್ರಹಂ ಚಲಮ್ ।**
**ಅಭ್ಯಾಸೇನ ತು ಕೌಂತೇಯ ವೈರಾಗ್ಯೇಣ ಚ ಗೃಹ್ಯತೇ ॥**

"ಮನಸ್ಸು ದುರ್ನಿಗ್ರಹವಾದದ್ದು ಮತ್ತು ಚಂಚಲವಾದುದು ಎಂಬುದು ನಿಸ್ಸಂಶಯ; ಅಭ್ಯಾಸದಿಂದಲೂ ವೈರಾಗ್ಯದಿಂದಲೂ ಇದನ್ನು ನಿಗ್ರಹಿಸಬಹುದು." (೬.೩೫)

ಶ್ರೀರಾಮಕೃಷ್ಣರ 'ಸಮದರ್ಶನ' ಅದ್ವೈತ ಸ್ತರದ ಸಿದ್ಧಿಯಾಗಿದ್ದು, ಸುಪ್ರಸಿದ್ಧವೇ ಆಗಿದೆ. ಈ ಸಂದರ್ಭದಲ್ಲಿ ನೆನೆಯಬೇಕಾದ್ದು ಈ ಗೀತಾಶ್ಲೋಕ :

**ವಿದ್ಯಾವಿನಯಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನಿ ।**
**ಶುನಿ ಚೈವ ಶ್ವಪಾಕೇ ಚ ಪಂಡಿತಾಃ ಸಮದರ್ಶಿನಃ ॥**

"ವಿದ್ಯೆ ಮತ್ತು ವಿನಯಗಳಿಂದ ಕೂಡಿದ ಜ್ಞಾನಿಗಳು ಬ್ರಾಹ್ಮಣ, ಗೋವು, ಆನೆ, ನಾಯಿ, ಚಂಡಾಲ – ಇವೆಲ್ಲದರಲ್ಲಿಯೂ ಸಮದರ್ಶಿಗಳಾಗಿರುವರು." (೫.೧೮)

ಇಂಥ ಸಮದರ್ಶನಕ್ಕೆ ಶ್ರೀರಾಮಕೃಷ್ಣರ ಜೀವನಕಥೆಯಲ್ಲಿ ಅನೇಕ ನಿದರ್ಶನಗಳು ಸಾಲುಗಟ್ಟಿ ನಿಂತಿವೆ. ಅವರು ಪರರ ಎಂಜಲನ್ನು ಭುಂಜಿಸಿದರು; ಚಂಡಾಲರ ಶೌಚಗೃಹವನ್ನು ತಮ್ಮ ತಲೆಗೂದಲಿನಿಂದ ಸ್ವಚ್ಛಗೊಳಿಸಿದರು! ಭೂಮದಂತೆ ಅಲ್ಪಕ್ಕೂ ಮಾನ್ಯತೆಯಿತ್ತ ಮಹಾನುಭಾವರು, ಶ್ರೀರಾಮಕೃಷ್ಣರು; ಅವರ ಕಣ್ಣಿಗೆ ಯಾವುದೂ ಸಣ್ಣದಾಗಿರಲಿಲ್ಲ.

ಶ್ರೀರಾಮಕೃಷ್ಣರಲ್ಲಿ ತೀವ್ರತಮ ಸಂವೇದನೆಯಿತ್ತು. ಅವರು ಏಕತಾ ಪ್ರಜ್ಞೆಯಿಂದ ಪ್ರತಿಯೊಂದು ಜೀವಿಯ ನೋವನ್ನೂ ತಮ್ಮದನ್ನಾಗಿ ಅನುಭವಿಸಬಲ್ಲವರಾಗಿದ್ದರು; ಅದು ಅಹಿಂಸೆಯ ಉತ್ತುಂಗ ಸ್ಥಿತಿ! ಭಗವದ್ಗೀತೆ ಹೇಳುವ ಭಕ್ತನ ಲಕ್ಷಣಗಳು ಶ್ರೀರಾಮಕೃಷ್ಣರಲ್ಲಿ ಸುವ್ಯಕ್ತ. ಅವರು ಭಕ್ತಿಯೋಗಕ್ಕೆ ಶೃಂಗ ದೃಷ್ಟಾಂತ! ಭಗವಂತನನ್ನು ಅವರು ಮಾತೃರೂಪದಲ್ಲಿ ಉಪಾಸಿಸಿ, ಸಾಕ್ಷಾತ್ಕರಿಸಿಕೊಂಡರು. ಈ ಸಂಬಂಧವಾಗಿ ಕೆಳಗಿನ ಗೀತಾಶ್ಲೋಕಗಳನ್ನು ನೋಡಬಹುದು :

**ಅನನ್ಯಚೇತಾಃ ಸತತಂ ಯೋ ಮಾಂ ಸ್ಮರತಿ ನಿತ್ಯಶಃ ।**
**ತಸ್ಯಾಹಂ ಸುಲಭಃ ಪಾರ್ಥ ನಿತ್ಯಯುಕ್ತಸ್ಯ ಯೋಗಿನಃ ॥**
**ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ ।**

"ಅನನ್ಯಚಿತ್ತನಾದ ಯಾವನು ಯಾವಜ್ಜೀವವೂ ನಿರಂತರವಾಗಿ ನನ್ನನ್ನು ಸ್ಮರಿಸುವನೋ, ಆ ನಿತ್ಯಯುಕ್ತನಾದ ಯೋಗಿಗೆ ನಾನು ಸುಲಭನು. ಅನನ್ಯರಾಗಿ ನನ್ನನ್ನು ಚಿಂತಿಸುತ್ತ ಯಾರು ನನ್ನನ್ನು ಉಪಾಸನೆ ಮಾಡುತ್ತಾರೆಯೋ...(ಅವರಿಗೂ ಹಾಗೆಯೇ)." (೮.೧೪, ೯.೨೨)

**"ಮಾಮೇಕಂ ಶರಣಂ ವ್ರಜ"** –ನನ್ನೊಬ್ಬನನ್ನೇ ಶರಣು ಹೊಂದು. ಮೇಲಿನ ಎಲ್ಲ ಉಕ್ತಿಗಳಿಗೂ ಉಜ್ವಲ ಉದಾಹರಣೆ ಶ್ರೀರಾಮ ಕೃಷ್ಣರು. ಕಾಳಿಕಾಗತ ಪ್ರಾಣರಾಗಿದ್ದರು, ಶ್ರೀರಾಮಕೃಷ್ಣರು, ಅವರ ಪ್ರತಿಯೊಂದು ನಡೆ, ನುಡಿಯೂ ಆ ತಾಯಿಯ ಸಂಕಲ್ಪದಂತೆ, ಆದೇಶದಂತೆ!

ತಮ್ಮ ಮಹೋಗ್ರ ಸಾಧನೆಯ ಅವಧಿಯಲ್ಲಿ ಶ್ರೀರಾಮ ಕೃಷ್ಣರು ಮೆರೆದ ಸಂಯಮ ಪರಮಾಶ್ಚರ್ಯಕರವಾದುದು. ಅವರ ಪಾಲಿಗೆ ಹಗಲಿರುಳುಗಳ ಭೇದವಾದರೂ ಎಲ್ಲಿತ್ತು? ಈ ಗೀತಾಶ್ಲೋಕವನ್ನು ಲಕ್ಷಿಸಬೇಕು :

**ಯಾ ನಿಶಾ ಸರ್ವಭೂತಾನಾಂ ತಸ್ಯಾಂ ಜಾಗರ್ತಿ ಸಂಯಮೀ।**
**ಯಸ್ಯಾಂ ಜಾಗ್ರತಿ ಭೂತಾನಿ ಸಾ ನಿಶಾ ಪಶ್ಯತೋ ಮುನೇಃ ॥**
" ಎಲ್ಲಾ ಪ್ರಾಣಿಗಳಿಗೆ ಯಾವುದು ರಾತ್ರಿಯೋ ಅದರಲ್ಲಿ ಜಿತೇಂದ್ರಿಯನು ಎಚ್ಚೆತ್ತಿರುತ್ತಾನೆ ; ಯಾವುದರಲ್ಲಿ ಪ್ರಾಣಿಗಳು ಎಚ್ಚೆತ್ತಿರುವುವೋ ಅದು ದ್ರಷ್ಟಾರನಾದ ಮುನಿಗೆ ರಾತ್ರಿ."
(೨.೬೯)

ಗೀತೆ ಹೇಳುವ **'ಲೋಕಸಂಗ್ರಹ'** ಶ್ರೀರಾಮಕೃಷ್ಣರ ಧ್ಯೇಯ ವಾಗಿತ್ತು. ಅವರು ಸದಾ ಸಮಾಧಿಮಗ್ನರಾಗಿರುತ್ತಿದ್ದರು, ನಿಜ. ಆದರೆ ಆಗಾಗ ಆ ಎತ್ತರದಿಂದ ಇಳಿದುಬಂದು ಲೋಕ ಕಲ್ಯಾಣ ಚಿಂತನದ 'ಉಪಾಧಿ'ಗೆ ಬದ್ಧರಾಗುತ್ತಿದ್ದುದು ಕಡು ಸೋಜಿಗದ ಮತ್ತು ಜಗತ್ತಿನ ಇತರ ಭಾಗವತ ಮಹನೀಯ ರಲ್ಲಿ ಅಪರೂಪದ ಸಂಗತಿಯೇ ಸರಿ!

**'ಸರ್ವಭೂತಹಿತೇ ರತಾಃ'** ಎಂದು ಒಂದೆಡೆ ಹೇಳುತ್ತದೆ, ಗೀತೆ. ಅದು ಇಂದಿನ ಸರ್ವೋದಯದ ಆದರ್ಶವಲ್ಲದೆ ಬೇರೆಯಲ್ಲ. ಶ್ರೀರಾಮಕೃಷ್ಣರು ಸಮಸ್ತ ಜೀವಿಗಳ ಹಿತದಲ್ಲಿ ಯಾವಾಗಲೂ ಆಸಕ್ತರಾಗಿದ್ದರು; ಸರ್ವೋದಯನಿಷ್ಠರಾಗಿದ್ದರು. ದೀನ ದಲಿತರ, ಪಾಪಿಗಳ ಉದ್ಧಾರ ಅವರ ಬದುಕಿನ ಗುರಿ ಯಾಗಿತ್ತು. ಪ್ರತಿಯೊಂದು ಜೀವಿಯ ಕಂಬನಿಯನ್ನೊರ ಸುವುದು ಕಡೆಯವರೆಗೂ ಅವರ ಕಳಕಳಿಯಾಗಿತ್ತು. ಸ್ವಂತ ಮುಕ್ತಿ ಅವರ ಹಂಬಲವಾಗಿರಲಿಲ್ಲ. ಅರ್ವಾಚೀನ ಸರ್ವೋ ದಯ ಯುಗಕ್ಕೆ ನಾಂದಿ ಹಾಡಿದವರೇ ಶ್ರೀರಾಮಕೃಷ್ಣರೆಂದರೆ ಅತಿಶಯೋಕ್ತಿಯಾಗದು!

ಗೀತೆ ಭಕ್ತನಿಗೆ ಇರಬೇಕಾದ ಗುಣಗಳ ಪಟ್ಟಿಯೊಂದನ್ನು ಕೊಡುತ್ತದೆ. ಅವೆಲ್ಲ ಶ್ರೀರಾಮಕೃಷ್ಣರಲ್ಲಿ ಮನೆ ಮಾಡಿರುವುದು ಗೋಚರಿಸುತ್ತದೆ. ಉದಾಹರಣೆಗಾಗಿ ಈ ಶ್ಲೋಕಗಳನ್ನು ನೋಡ ಬಹುದು:

**ಅದ್ವೇಷ್ಟಾ ಸರ್ವಭೂತಾನಾಂ ಮೈತ್ರ ಃ ಕರುಣ ಏವ ಚ ।**
**ನಿರ್ಮಮೋ ನಿರಹಂಕಾರಃ ಸಮದುಃಖಸುಖಃ ಕ್ಷಮೀ ॥**

**ಸಂತುಷ್ಟಃ ಸತತಂ ಯೋಗೀ ಯತಾತ್ಮಾ ದೃಢನಿಶ್ಚಯಃ ।**
**ಮಯ್ಯರ್ಪಿತ ಮನೋಬುದ್ಧಿರ್ಯೋ ಮದ್ಭಕ್ತ ಃ ಸ ಮೇ ಪ್ರಿಯಃ॥**

"ಯಾವನು ಯಾವ ಪ್ರಾಣಿಗಳನ್ನೂ ದ್ವೇಷಿಸುವುದಿಲ್ಲವೋ, ಮಿತ್ರಭಾವದಿಂದ ಕೂಡಿರುವನೋ, ಕರುಣೆಯುಳ್ಳವನೋ, ಅಹಂಕಾರ, ಮಮಕಾರಗಳಿಲ್ಲದವನೋ, ಸುಖದುಃಖಗಳಲ್ಲಿ ಸಮಾನನಾಗಿರುವವನೋ, ಕ್ಷಮಾಶೀಲನೋ, ಯಾವಾಗಲೂ ತೃಪ್ತನೋ, ನನ್ನಲ್ಲಿ ಅರ್ಪಿಸಲ್ಪಟ್ಟ ಮನೋಬುದ್ಧಿಗಳುಳ್ಳವನೋ, ನನ್ನ ಭಕ್ತನೋ–ಅವನು ನನಗೆ ಪ್ರಿಯನು." (೧೨. ೧೩,೧೪)

ಗೀತೆ ಹೇಳುವ ವಾಙ್ಮಯ ತಪಕ್ಕೂ ಶ್ರೇಷ್ಠ ನಿದರ್ಶನ, ಶ್ರೀರಾಮಕೃಷ್ಣರು. ಅವರ ವಾಣಿ **'ಪ್ರಿಯಹಿತ'**ವಾದುದು; ಅದರಲ್ಲಿ ಕಾವ್ಯಗುಣ ವಿಪುಲವಾಗಿದೆ.

ಭಗವದ್ಗೀತೆ ಕಡೆಯಲ್ಲಿ ಹೇಳುತ್ತದೆ :

**ಇತಿ ತೇ ಜ್ಞಾನಮಾಖ್ಯಾತಂ ಗುಹ್ಯಾದ್ಗುಹ್ಯತರಂ ಮಯಾ ।**
**ವಿಮೃಶ್ಯೈತದಶೇಷೇಣ ಯಥೇಚ್ಛಸಿ ತಥಾ ಕುರು ॥**

"ಹೀಗೆ ಗುಹ್ಯಕ್ಕಿಂತಲೂ ಗುಹ್ಯತರವಾದ ಜ್ಞಾನವು ನನ್ನಿಂದ ನಿನಗೆ ಹೇಳಲ್ಪಟ್ಟಿತು. ಇದನ್ನು ಸಂಪೂರ್ಣವಾಗಿ ವಿಮರ್ಶೆ ಮಾಡಿ, ಹೇಗೆ ಇಚ್ಛಿಸುವೆಯೋ ಹಾಗೆ ಮಾಡು."(೧೮. ೬೩)

ಇಲ್ಲಿ ವಿಮರ್ಶೆಯ ಸ್ವಾತಂತ್ರ್ಯವನ್ನು ಗೀತಾಚಾರ್ಯ ಕೊಟ್ಟಿರುವುದು ಬಹಳ ಗಮನಾರ್ಹ. ಹೀಗೆಯೇ ಶ್ರೀರಾಮ ಕೃಷ್ಣರೂ ತಮ್ಮನ್ನು ಪರೀಕ್ಷಿಸುವ ಸ್ವಾತಂತ್ರ್ಯವನ್ನು ಶಿಷ್ಯರಿಗೆ ಧಾರಾಳವಾಗಿ ಕೊಟ್ಟಿದ್ದರು!

**'ಸರ್ವಧರ್ಮಸಮನ್ವಯಾಚಾರ್ಯ'** ಎಂದು ಶ್ರೀರಾಮಕೃಷ್ಣರನ್ನು ಕರೆಯುವುದು ರೂಢಿಯಾಗಿದೆ. ಧರ್ಮಗಳ ಮಾತಿರಲಿ, ಅವರು ಎಲ್ಲ ದೃಷ್ಟಿಗಳಿಂದಲೂ **ಸಮನ್ವಯ ಪ್ರಾಚಾರ್ಯ!**

ಜಗತ್ತಿನ ಧಾರ್ಮಿಕ ಇತಿಹಾಸದಲ್ಲಿ ಶ್ರೀರಾಮಕೃಷ್ಣರು ಒಂದು ವಿರಳತಮ ಪ್ರಕ್ರಿಯೆ. ತಮ್ಮ ಪುಸ್ತಕದ ಆದಿಯಲ್ಲೆ ಇಷರ್‌ವುಡ್ ಹೇಳುವಂತೆ, ಅವರು ವ್ಯಕ್ತಿಯಲ್ಲ; ದೈವೀ ಘಟನೆ, ಲೋಕೋತ್ತರ ವಿದ್ಯಮಾನ ('ಫಿನಾಮೆನನ್'!).

ಈ ಗೀತೋಕ್ತಿಯನ್ನೂ ನೆನೆಯಬೇಕು:

**ಮನುಷ್ಯಾಣಾಂ ಸಹಸ್ರೇಷು ಕಶ್ಚಿದ್ಯತತಿ ಸಿದ್ಧಯೇ ।**
**ಯತತಾಮಪಿ ಸಿದ್ಧಾನಾಂ ಕಶ್ಚಿನ್ಮಾಂ ವೇತ್ತಿ ತತ್ತ್ವತಃ ॥**

"ಸಾವಿರ ಮನುಷ್ಯರಲ್ಲಿ ಯಾವನೋ ಒಬ್ಬನು ಸಿದ್ಧಿಗಾಗಿ ಪ್ರಯತ್ನಿಸುತ್ತಾನೆ. ಹಾಗೆ ಯತ್ನಿಸುವ ಸಿದ್ಧರಲ್ಲಿಯೂ ಕೂಡ ಯಾವನೋ ಒಬ್ಬನು ನನ್ನನ್ನು ಯಥಾರ್ಥವಾಗಿ ತಿಳಿಯು ತ್ತಾನೆ."
(೭.೩)

ಒಂದು ಸ್ವಾರಸ್ಯ : ರಾಮ, ಕೃಷ್ಣ, ಇಬ್ಬರೂ ಸಂಯೋಗ ಗೊಂಡಿದ್ದಾರೆ, ಶ್ರೀರಾಮಕೃಷ್ಣರಲ್ಲಿ. ಗೀತೆಯನ್ನು ಬೋಧಿಸಿ ದವನು ಶ್ರೀಕೃಷ್ಣನಲ್ಲವೆ? ಆದ್ದರಿಂದ, ಅದು ಶ್ರೀರಾಮಕೃಷ್ಣರ ಬೋಧನೆಯೇ ಅಲ್ಲವೆ, ತಾರ್ಕಿಕವಾಗಿ ಆಲೋಚಿಸಿದರೆ? (ಅನ್ಯರಿಗೆ ಬೋಧನೆಯೂ ಹೌದು, ಸ್ವಂತಕ್ಕೆ ಸಾಧನೆಯೂ ಹೌದು!).